ವಿ ರೈತ ಮಿತ್ರ



Vijayavani pg 09

ತರಕಾರಿ ಬೆಳೆಗಳಲ್ಲಿ ರಾಸಾಯನಿಕ ಸಿಂಪಡಣೆ ಬದಲು ಕೀಟ/ರೋಗಗಳ ನಿರ್ವಹಣೆಗೆ ಪರ್ಯಾಯ ವಿಧಾನಗಳ ಬಗ್ಗೆ ಮಾಹಿತಿ ನೀಡಿ.

। ತರುಣ್ ಕುಣಿಗಲ್

ರೈತರು ಕೀಟ ಮತ್ತು ರೋಗದ ನಿರ್ವಹಣೆಗಾಗಿ ರಾಸಾಯನಿಕಗಳನ್ನು ಹೆಚ್ಚಾಗಿ ಸಿಂಪಡಣೆ ಮಾಡುವುದರಿಂದ ಖರ್ಚು ಹೆಚ್ಚಾಗುವುದಲ್ಲದೆ, ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ರೈತರು ಪರ್ಯಾಯ ವಿಧಾನಗಳನ್ನು ಅನುಸರಿಸುವುದು ಅವಶ್ಯಕ. ಒಂದೇ ಬೆಳೆಯನ್ನು ಅಥವಾ ಒಂದೇ ಕುಟುಂಬಕ್ಕೆ ಸೇರಿದ ಬೆಳೆಗಳನ್ನು ಪದೇಪದೆ ಬೆಳೆಯದೆ ಬೇರೆ ಬೆಳೆ ಬೆಳೆಯುವುದು, ಜೈವಿಕ ಗೊಬ್ಬರಗಳಾದ ಟ್ರೈಕೋಡರ್ಮ ಹಾಗೂ ಸೂಡೋಮೋನಾಸ್‌ಗಳನ್ನು ಕೊಟ್ಟಿಗೆ ಗೊಬ್ಬರದೊಂದಿಗೆ ಸೇರಿಸಿ ಬಳಸುವುದರಿಂದ ಮಣ್ಣು ಹಾಗೂ ಬೀಜದಿಂದ ಹರಡುವ ಅನೇಕ ರೋಗಗಳನ್ನು ಹತೋಟಿ ಮಾಡಬಹುದು. ತಡೆ ಬೆಳೆಗಳನ್ನು (ಉದಾ: ಜೋಳ) ಪ್ರಮುಖ ಬೆಳೆಯ ನಾಲ್ಕು ದಿಕ್ಕಿನ ಸುತ್ತಲೂ ಬೆಳೆಯುವುದರಿಂದ ಕೀಟ ಮತ್ತು ರೋಗಾಣುಗಳನ್ನು ಪ್ರಮುಖ ಬೆಳೆಗೆ ಹರಡದಂತೆ ತಡೆಯಬಹುದು. ಆಕರ್ಷಕ ಬೆಳೆಯನ್ನು ಮುಖ್ಯ ಬೆಳೆಯೊಂದಿಗೆ ಬೆಳೆಯುವುದರಿಂದ ಕೀಟಗಳನ್ನು ಆಕರ್ಷಕ ಬೆಳೆ ಆಕರ್ಷಿಸಿ ಹತೋಟಿ ಮಾಡಬಹುದು. ಉದಾ: ಟೊಮ್ಯಾಟೋ ಬೆಳೆಯಲ್ಲಿ ಚೆಂಡು ಹೂವು ಹಾಗೂ ಕೋಸಿನಲ್ಲಿ ಸಾಸುವೆ ಬಿತ್ತನೆ ಮಾಡತಕ್ಕದ್ದು. ಹಳದಿ ಬಣ್ಣದ ಅಂಟು ಕಾರ್ಡ್‌ಗಳನ್ನು ತಾಕುಗಳಲ್ಲಿ ಅಲ್ಲಲ್ಲಿ ನೇತುಹಾಕುವುದು, ಮೋಹಕ ಬಲೆಗಳನ್ನು ಬಳಸಿ ಗಂಡು ಕೀಟಗಳನ್ನು ಆಕರ್ಷಿಸಿ ಕೀಟಗಳ ಸಂತತಿ ಕುಂಠಿತಗೊಳಿಸುವುದು ಹಾಗೂ ಬೇವಿನ ಎಣ್ಣೆ, ಬೇವಿನ ಕಷಾಯ, ಬೇವಿನ/ಹೊಂಗೆ ಸೋಪು ಇವುಗಳನ್ನು ಸಿಂಪಡಣೆ ಮಾಡುವುದು.

। ಡಾ. ಎಂ.ಶಾಲಿನಿ ತೋಟಗಾರಿಕೆ ತಜ್ಞರು

Implementation of QCO for cotton bales postponed to 2026

The Hindu Bureau
COIMBATORE

The Bureau of Indian Standards (BIS) has postponed the implementation of Quality Control Order (QCO) on cotton bales to August 2026 from August this year. The Cotton Bales (Quality Control) Order, 2023 has been amended for implementation from August 27, 2026.

Industry sources said the textile industry, the main cotton consumer, welcomed the move.

However, the sources said the Centre should withdraw the QCO as the BIS specifications for cotton bales do not have norms for contamination levels permitted for cotton.

The contamination levels are high in Indian cotton and the industry imports high-quality cotton that is contamination free. Cotton growers in other countries will not go in for BIS stamp.



The textile industry welcomed the Centre's move.

Further, overseas garment brands are nominating raw material suppliers now and the Indian textile industry sources substantial quantity of cotton or yarn from the nominated suppliers.

They will miss the orders as these suppliers will not have BIS registration.

Since there are several practical challenges in implementing the order, the government should withdraw it, they said.

Hindu pg 03

ಕೃಷಿಯಲ್ಲಿ ದೇಶಕ್ಕೆ ರಾಜ್ಯ ಮಾದರಿ:ಚಲುವ

ಕೃಷಿ ವಲಯ ಬಲಪಡಿಸಲು ಐಸಿಎಆರ್ ಸಹಕಾರ ಮುಖ್ಯ

Hosadiganta pg 07

ನವದೆಹಲಿ: ಕರ್ನಾಟಕ ಕೃಷಿ ನಾವೀನ್ಯತೆಯಲ್ಲಿ ಯಾವಾಗಲೂ ಮುಂಚೂಣಿಯಲ್ಲಿದ್ದು, ರೈತರ ಕಲ್ಯಾಣಕ್ಕಾಗಿ ನವೀನ ಯೋಜನೆಗಳನ್ನು ರೂಪಿಸುವಲ್ಲಿ ದೇಶಕ್ಕೆ ಮಾದರಿಯಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಸೋಮವಾರ ನಡೆದ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಆಡಳಿತ ಮಂಡಳಿ ಸಭೆಯಲ್ಲಿ ರಾಜ್ಯದ ಕೃಷಿ ವಲಯವನ್ನು ಬಲಪಡಿಸುವ ದೂರದೃಷ್ಟಿಯ ಯೋಜನೆಗಳನ್ನು ಮಂಡಿಸಿ ಅವರು ಮಾತನಾಡಿದರು. ಕೃಷಿ ನಾವೀನ್ಯತೆಯಲ್ಲಿ ಕರ್ನಾಟಕ ತನ್ನ ಪಾರಮ್ಯವನ್ನು ಮುಂದುವರಿಸಿದೆ ಎಂದರಲ್ಲದೆ, ರೈತ ಕೇಂದ್ರಿತ, ಆಧುನಿಕ ಮತ್ತು ಹವಾಮಾನ-ತಡೆಗಟ್ಟುವ ಕೃಷಿ ವ್ಯವಸ್ಥೆಯನ್ನು ರೂಪಿಸಲು ಐಸಿಎಆರ್ ಸಹಕಾರ ಬಹುಮುಖ್ಯವಾಗಿದೆ ಎಂದರು.

ರಾಗಿ, ರಬಿ, ಜೋಳ ಮತ್ತು ತೊಗರಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ), ಇ-ನಾಮ್ ಮೂಲಕ ರೈತ ಉತ್ಪಾದಕ ಸಂಸ್ಥೆಗಳಿಗೆ (ಎಫ್‌ಪಿಒ) ಮಾರುಕಟ್ಟೆ ಸಂಪರ್ಕ, ರಾಗಿ, ಒಣ ಬೇಸಾಯ, ತೋಟಗಾರಿಕೆ, ಔಷಧೀಯ ಸಸ್ಯಗಳು ಮತ್ತು ಆಹಾರ ಸಂಸ್ಕರಣೆಗೆ ಐಸಿಎಆರ್-ರಾಜ್ಯ ಸಹಭಾಗಿತ್ವದ ವಿಶೇಷ ಸಂಶೋಧನಾ ಸಂಸ್ಥೆಗಳ ಸ್ಥಾಪನೆಯ ಅಗತ್ಯವಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯಗಳಿಗೆ ಖಾಸಗಿ ಧನಸಹಾಯದ ಮೇಲೆ



ಜಿಎಸ್‌ಟಿ ವಿನಾಯಿತಿ, ಕೃಷಿ ಸ್ಟಾರ್ಟ್‌ಅಪ್‌ಗಳಿಗೆ ಬೀಜ ನಿಧಿ, ಇನ್‌ಕ್ಯುಬೇಶನ್ ಮತ್ತು ಉದ್ಯಮಶೀಲತೆ ಕೇಂದ್ರಗಳ ಸ್ಥಾಪನೆ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳಿಗೆ ಕೇಂದ್ರದ ಸರ್ಕಾರ ಅಗತ್ಯ ಬೆಂಬಲವನ್ನು ನೀಡಬೇಕೆಂದು ಕೋರಿದರು.

ಕೃಷಿ ವಿಜ್ಞಾನ ಕೇಂದ್ರಗಳ (ಕೆವಿಕೆ) ವಿಷಯ ತಜ್ಞರ (ಎಸ್‌ಎಂಎಸ್) ಹುದ್ದೆಗಳನ್ನು ಸಹಾಯಕ ಪ್ರಾಧ್ಯಾಪಕರಿಗೆ ಸಮಾನಗೊಳಿಸುವ ಪ್ರಸ್ತಾವವನ್ನು ಮಂಡಿಸಿದ ಸಚಿವರು, ಇದರಿಂದ ರಾಜ್ಯ ಸರ್ಕಾರಗಳ ಮೇಲಿನ ಆರ್ಥಿಕ ಒತ್ತಡ ಕಡಿಮೆಯಾಗಲಿದೆ ಎಂದರು.

ಕರ್ನಾಟಕದ ಮಣ್ಣಿನ ಆರೋಗ್ಯಕ್ಕಾಗಿ ಐಸಿಎಆರ್ ಟಾಸ್ಕ್ ಫೋರ್ಸ್ ಮತ್ತು ನಿಧಿ, ಸಾವಯವ ಹಾಗೂ ಸಿರಿಧಾನ್ಯ ಅಭಿಯಾನಕ್ಕೆ ರಾಷ್ಟ್ರೀಯ ಮನ್ನಣೆಗೆ ಕೇಂದ್ರದ ನೆರವನ್ನು ಕೋರಿದರು.

Udayavani pg 04

■ **ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ:** ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ-ಭೀಮೋತ್ಸವ. ಮುಖ್ಯ ಅತಿಥಿಗಳು: ಸಚಿವ ಡಾ.ಎಚ್.ಸಿ.ಮಹದೇವಪ್ಪ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಉಪ ಮಹಾನಿರೀಕ್ಷಕ ರವಿ ಡಿ. ಚನ್ನಣ್ಣನವರ್, ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯ ಡಾ.ದೇವಪ್ಪ ವಿ., ಬೆಂಗಳೂರು ಕೃಷಿ ವಿವಿಯ ಕುಲಪತಿ ಡಾ.ಎಸ್.ವಿ.ಸುರೇಶ್. ಸ್ಥಳ: ಕುವೆಂಪು ಸಭಾಂಗಣ (ಸೌತ್ ಬ್ಲಾಕ್), ಜಿಕೆವಿಕೆ. ಬೆಳಗ್ಗೆ 10.30ಕ್ಕೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ವೈಜ್ಞಾನಿಕ ಉತ್ಪಾದನೆಗೆ ಅಧಿಕೃತ ಚಾಲನೆ: ಹತ್ತು ದಿನದಲ್ಲಿ ಉತ್ಪಾದನೆ

ರಾಜ್ಯದಲ್ಲಿ ಮತ್ತೆ ಸದ್ದು ಮಾಡಲಿದೆ ನೀರಾ

ಎಸ್.ರುದ್ರೇಶ್ವರ

ಬೆಂಗಳೂರು ದಕ್ಷಿಣ: ಜಿಲ್ಲೆಯಲ್ಲಿ ನೀರಾ ಮತ್ತೆ ಸದ್ದುಮಾಡುತ್ತಿದೆ. ತೆಂಗಿನ ಮರದಿಂದ ವೈಜ್ಞಾನಿಕವಾಗಿ ನೀರಾ ಉತ್ಪಾದನೆ ಮಾಡುವ ಅಧಿಕೃತ ಪ್ರಕ್ರಿಯೆಗಳು ಆರಂಭಗೊಂಡಿವೆ. ಕೆಲ ಎಫ್‌ಪಿಒಗಳು ನೀರಾ ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟಕ್ಕೆ ಮುಂದಾಗಿವೆ. ಇನ್ನು 10 ದಿನಗಳಲ್ಲಿ ನೀರಾ ಉತ್ಪಾದನೆ ಪ್ರಕ್ರಿಯೆಗೆ ಚಾಲನೆ ಸಿಗಲಿದೆ.

25 ವರ್ಷದ ಹಿಂದೆ ಚನ್ನಪಟ್ಟಣದಲ್ಲಿ ನೀರಾ ಚಳುವಳಿ ಉತ್ತುಂಗಕ್ಕೇರಿತ್ತು. ಕಪ್ಪುತಲೆ, ನುಸಿ ಹುಳುವಿನ ಹಾವಳಿಯಿಂದ ಕಂಗಾಲಾಗಿದ್ದ ತೆಂಗು ಬೆಳೆಗಾರರು ನೀರಾಗೆ ಅನುಮತಿ ಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹೇರುವ ಜೊತೆಗೆ, ತಾವೇ ನೀರಾ ಇಳಿಸಲಾರಂಭಿಸಿದರು. ನೀರಾಚಳವಳಿ ತಾರಕಕ್ಕೇರಿ ಗೋಲಿಬಾರ್ ನಡೆದು ಇಬ್ಬರು ರೈತರು ಬಲಿಯಾಗಿದ್ದರು.

ಇದೀಗ ಜಿಲ್ಲೆಯಲ್ಲಿ ನೀರಾ ಉತ್ಪಾದನೆ ಪ್ರಾರಂಭವಾಗಲಿದೆ. ಚನ್ನಪಟ್ಟಣದಲ್ಲಿ ನೀರಾ ಉತ್ಪಾದನೆಗೆ ಎಲ್ಲಾ ಸಿದ್ಧತೆಗಳು ಪ್ರಾರಂಭವಾಗಿದ್ದು, ಎರಡು ಎಫ್‌ಪಿಒಗಳ ಮೂಲಕ ನೀರಾವನ್ನು ಇಳಿಸಿ, ಸಂಸ್ಕರಣೆ ಮಾಡಿ, ಅದನ್ನು ಗ್ರಾಹಕರಿಗೆ ಮಾರಾಟ ಮಾಡುವ ಹಾಗೂ ನೀರಾದಿಂದ ತಯಾರಿಸಬಹುದಾದ ಉಪ ಉತ್ಪನ್ನಗಳಾದ



ಪ್ರಾಯೋಗಿಕ ತಯಾರಿ

ತಿಟ್ಟಮಾರನಹಳ್ಳಿ ಸಮೀಪ ಬೆಂ-ಮೈ ಬೈಪಾಸ್ ರಸ್ತೆಯಲ್ಲಿ ನೀರ ಸಂಸ್ಕರಣೆ ಮತ್ತು ಸಂಗ್ರಹಣಾ ಘಟಕವನ್ನು ಪ್ರಾರಂಭಿಸಲು ಮುಂದಾಗಿದ್ದು, ಇನ್ನು ಹತ್ತು ದಿನದಲ್ಲಿ ಘಟಕ ಕಾರ್ಯಾರಂಭವಾಗಲಿದೆ. ಇಲ್ಲಿಂದ ನೀರಾ ಸಂಗ್ರಹಣೆ ಮತ್ತು ಮಾರಾಟ ಪ್ರಕ್ರಿಯೆ ನಡೆಯಲಿದೆ. ಇನ್ನು ವಿರೂಪಾಕ್ಷಿಪುರ ಗ್ರಾಮದಲ್ಲಿ ರೈತ ಶ್ರೀನಿವಾಸ್ ಎಂಬುವರು ತಮ್ಮ ತೋಟದಲ್ಲಿ ಸುಧಾರಿತ ವಿಧಾನದಲ್ಲಿ ನೀರಾ ಇಳಿಸಲು ಸಿದ್ಧತೆ ನಡೆಸಿದ್ದಾರೆ.

ಬೆಲ್ಲ, ಸಕ್ಕರೆ, ಚಾಕೋಲೇಟ್ ಮೊದಲಾದವುಗಳನ್ನು ತಯಾರಿಸುವ ಘಟಕ ಸ್ಥಾಪನೆಗೂ ಸಿದ್ಧತೆ ನಡೆದಿದೆ.

ರೈತ ಉತ್ಪಾದನಾ ಕಂಪನಿ ಸಿದ್ಧತೆ

ಚನ್ನಪಟ್ಟಣದ ಕೆಂಗಲ್ ತೋಟಗಾರಿಕಾ ಬೆಳೆಗಾರರ ರೈತ ಉತ್ಪಾದನಾ ಕಂಪನಿ ಮತ್ತು ವಿರೂಪಾಕ್ಷಿಪುರ ಗ್ರಾಮದಲ್ಲಿರುವ ಮತ್ತೊಂದು ರೈತ ಉತ್ಪಾದಕ ಕಂಪನಿಯ ಮೂಲಕ ನೀರಾ ಉತ್ಪಾದನೆಗೆ ಸಿದ್ಧತೆ ನಡೆಸಲಾಗಿದೆ. ಅಬಕಾರಿ ಕಾಯಿದೆ ಪ್ರಕಾರ ಮಂಗಳೂರು, ಉಡುಪಿ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ಜಿಲ್ಲೆಯಲ್ಲಿ ತೆಂಗಿನ ಮರದಿಂದ ನೀರಾ ಇಳಿಸಲು ಅನುಮತಿ ಇಲ್ಲ. ಆದರೆ ಎಫ್‌ಪಿಒಗಳಿಗೆ ಅನುಮತಿ ನೀಡಲು ಅಬಕಾರಿ ಇಲಾಖೆ ಮುಂದಾಗಿದೆ.

> ತೆಂಗುಬೆಳೆಗಾರರ ಆದಾಯ ಹೆಚ್ಚಿಸಲು ವೈಜ್ಞಾನಿಕವಾಗಿ ನೀರಾ ಇಳಿಸಲು ಎಫ್‌ಪಿಒಗಳ ಮೂಲಕ ಸಿದ್ಧತೆ ನಡೆಸಲಾಗಿದೆ. ತಿಟ್ಟಮಾರನಹಳ್ಳಿ ಬಳಿ ನೀರಾ ಸಂಸ್ಕರಣಾ ಘಟಕ ನಿರ್ಮಾಣ ಮಾಡಲಿದೆ.
>
> ಪಿ.ಪಿ. ಯೋಗೇಶ್ವರ್, ಶಾಸಕ


HosadigantaPg 07

HosadigantaPg 06

ಗೀರ್ ಎಂಬ ಗೋತಳಿಯ ಗೈರತ್ತು!

ನಾವಿಂದು ಅತಿ ಹೆಚ್ಚು ಹಾಲು ಕೊಡುತ್ತವೆ ಎಂದು ಯಾವ ವಿದೇಶಿ ತಳಿಗಳ ಮೊರೆ ಹೋಗಿದ್ದೇವೆಯೋ, ಅದಕ್ಕಿಂತಲೂ ಹೆಚ್ಚಿನ ಹಾಲು ನೀಡುವ ಗೋವಿನ ತಳಿಗಳು ನಮ್ಮ ದೇಶದಲ್ಲೇ ಕಂಡುಬರುತ್ತವೆ.

ಧರಣಿ ಮಂಡಲ
ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com




ಭಾರತದ ಅತಿ ಪುರಾತನ ಗೋತಳಿಗಳಲ್ಲಿ ಗೀರ್ ಕೂಡಾ ಒಂದು. ಗೀರ್ ಎಂಬ ಕಾಡಿನಲ್ಲಿ ಹುಟ್ಟಿ ಬೆಳೆದು ಬಂದಿರುವುದರಿಂದ ಈ ದನಗಳಿಗೆ ಗೀರ್ ಜಾತಿಯ ದನಗಳೆಂದು ಹೆಸರು ಬಂದಿದೆ. ಈ ದನಗಳನ್ನು ಸಾಕುವುದೊಂದೇ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದ ಅಂದಿನ ಪಶುಪಾಲಕರು ಮೂಲತಃ ಕಾಡಿನಲ್ಲಿಯೇ ವಾಸವಾಗಿದ್ದರು. ಹಾಗೆಯೇ ಗುಜರಾತಿನ ಅಂದಿನ ಪಶುಪಾಲಕರು ವಂಶಪಾರಂಪರ್ಯವಾಗಿ ಈ ಹಾಲಿನ ತಳಿಯನ್ನು ಉತ್ತಮವಾಗಿ ಸಂವರ್ಧನೆ ಮಾಡಿದುದಲ್ಲದೆ ಬಹಳ ಶ್ರದ್ಧೆಯೊಂದಿಗೆ ಸಾಕಿ ಬೆಳೆಸುದುದರ ಪರಿಣಾಮ ಈ ತಳಿಗಳು ಇಂದಿಗೂ ಶುದ್ಧ ಹೈನ ತಳಿಗಳಾಗಿಯೇ ಉಳಿದುಕೊಂಡಿವೆ. ಅಷ್ಟೇ ಅಲ್ಲದೆ ಈ ತಳಿಯನ್ನು ಸಾಕಿ ಬೆಳೆಸುವುದರಲ್ಲಿ ಅಲ್ಲಿಯ ಕೆಲ ಸ್ಥಳೀಯ ಅರಸರ ಪಾಲೂ ಸಹ ಇದೆ ಎನ್ನಲಾಗುತ್ತದೆ.

ದೇಶದ ಒಳಗೆ ಮತ್ತು ಹೊರಗೆ ಅತಿ ಹೆಚ್ಚು ಬೇಡಿಕೆ ಇರುವ ಹಾಲಿನ ತಳಿಯಿದು. ಇಂದಿಗೂ ಉತ್ತರ ಪ್ರದೇಶದ ಕೆಲ ಮನೆಗಳಲ್ಲಿ ದಿನಕ್ಕೆ 40 ರಿಂದ 50 ಲೀಟರ್ ಹಾಲನ್ನು ಕೊಡುವ ಈ ತಳಿಗಳನ್ನು ಕಾಣಬಹುದಾಗಿದೆ. ಉತ್ತಮವಾದ ಈ ತಳಿ ಬೇಕೆಂದರೆ ಕಡಿಮೆ ಎಂದರೂ ಜೇಬಲ್ಲಿ ಒಂದು ಲಕ್ಷ ರೂಪಾಯಿ ಇಟ್ಟುಕೊಳ್ಳಲೇ ಬೇಕು. ಸದ್ಯಕ್ಕೆ ಭಾರತದ ತಳಿಗಳ ಪೈಕಿ ದುಬಾರಿ ತಳಿ ಎಂದೇ ಇದನ್ನು ಹೇಳಬಹುದು. ಆದರೆ ಎಷ್ಟು ಬೆಲೆ ಕೊಟ್ಟರು ಇದರ ಹಾಲಿನ ಪ್ರಮಾಣ ಮತ್ತು ಸತ್ವದ ವಿಚಾರದಲ್ಲಿ ಬೇರ್ಯಾವುದೇ ವಿದೇಶಿ ಹಸುಗಳು ಇಂದಿಗೂ ಇದಕ್ಕೆ ಸಾಟಿಯಿಲ್ಲ.

ತೂಕದಲ್ಲಿ ಈ ಹೋರಿಗಳು 450 ರಿಂದ 500 ಕೆ.ಜಿ. ಹಾಗೂ ಆಕಳುಗಳು 375 ರಿಂದ 450 ಕೆ.ಜಿ. ತೂಕವಿರುತ್ತವೆ. ಇವುಗಳು ಬಿಸಿಲು, ಚಳಿ, ಮಳೆ, ಗಾಳಿಯ ವಾತಾವರಣಗಳಲ್ಲಿ ಬೆಳೆದುದುರ ಪರಿಣಾಮ ರೋಗನಿರೋಧಕ ಶಕ್ತಿ ಇವುಗಳಲ್ಲಿ ಹೆಚ್ಚು. ಇವುಗಳು ಧೈರ್ಯಸ್ಥ ತಳಿಗಳೆಂದೇ ಹೆಸರುಪಡೆದವು. ಸುಮಾರು ಐದಾರು ದನಗಳು ಸೇರಿಕೊಂಡು ಒಂದು ಕ್ರೂರ ಪ್ರಾಣಿಯನ್ನು ಎದುರಿಸಿ ಹಿಮ್ಮೆಟ್ಟಿಸುವ ಶಕ್ತಿ ಹಾಗೂ ಧೈರ್ಯವನ್ನು ಇವುಗಳು ಹೊಂದಿವೆ. ಇಂತಹ ಗೀರ್ ತಳಿಯೊಂದೇ ಅಲ್ಲ, ಭಾರತದ ಹಲವು ಪ್ರಮುಖ ಹಾಲಿನ ತಳಿಗಳು ಇಂದು ನಮ್ಮಲ್ಲಿರುವುದಕ್ಕಿಂತ ಹೆಚ್ಚಾಗಿ ವಿದೇಶಗಳಲ್ಲಿ ಅಭಿವೃದ್ಧಿ ಹೊಂದುತ್ತಿವೆ, ಪರಿಶುದ್ಧ ಹಾಲನ್ನೂ ಸಹ ನೀಡುತ್ತಿವೆ. ಆದರೆ ನಾವು ಮಾತ್ರ ನಮ್ಮ ದೇಶಿ ತಳಿಯ ಮಹತ್ವವನ್ನು ಅರಿಯದೇ ಕಡೆಗಣಿಸಿದ್ದೇವೆ.

ವಿಶ್ವದ ಬಹುತೇಕ ದೇಶಗಳಲ್ಲಿ ಇಂದು ಭಾರತೀಯ ತಳಿಯ ದನಗಳು ಅಭಿವೃದ್ಧಿ ಹೊಂದಿರುವುದನ್ನು ನಾವು ಕಾಣಬಹುದಾಗಿದೆ. ಆದರೆ ನಮ್ಮಲ್ಲೇ ಆ ದನಗಳು ಕಡೆಗಣಿಸಲ್ಪಟ್ಟಿವೆ. ಅದೇ ರೀತಿ ಭಾರತದಿಂದ ಕೊಂಡೊಯ್ದ ಗೀರ್ ತಳಿಯೊಂದು ಬ್ರೆಜಿಲ್‌ನಲ್ಲಿ ಪ್ರಖ್ಯಾತ ತಳಿಯಾಗಿ ಸಂವರ್ಧನೆಗೊಂಡಿದೆ. ಹೀಗೆ ನಮ್ಮ ದೇಶದಿಂದ ಹೆಚ್ಚಾಗಿ ರಫ್ತಾದ ತಳಿಗಳಲ್ಲಿ ಗೀರ್ ಸಹ ಒಂದು. ಇದು ಭಾರತದಲ್ಲೇ ಅತಿ ಹೆಚ್ಚು ಹಾಲನ್ನು ನೀಡುವ ತಳಿಯೆಂದೇ ಹೇಳಲಾಗುತ್ತದೆ. ದೇಶದಲ್ಲಷ್ಟೇ ಅಲ್ಲದೆ ಈಗ ಇವು ವಿದೇಶಗಳಲ್ಲೂ ದಾಖಲೆಗಳನ್ನು ಮುರಿಯಲು ಪ್ರಾರಂಭಿಸಿವೆ. ಬ್ರೆಜಿಲ್‌ನಲ್ಲಿ ಅತ್ಯುತ್ತಮವಾಗಿ ಸಂವರ್ಧನೆಗೊಂಡಿರುವ ಇದೇ ಜಾತಿಯ ಮತ್ತೊಂದು ಗೀರ್ ಅತಿ ಹೆಚ್ಚು ಹಾಲನ್ನು ನೀಡುವುದರ ಮೂಲಕ ಗಿನ್ನಿಸ್ ದಾಖಲೆಯನ್ನೇ ಮಾಡಿದೆ. ಮೇ 14, 2012 ರಂದು ಬ್ರೆಜಿಲ್‌ನ ಜಟಾಯಿಯಲ್ಲಿ ನಡೆದ 40ನೇ ಕೃಷಿ ಪ್ರದರ್ಶನದಲ್ಲಿ ಈ ದಾಖಲೆ ಸೃಷ್ಟಿಯಾಗಿದೆ. ಶಿರಾ ಫಿಜ್ಜಾ ಎಂಬ ಹೆಸರಿನ ಗೀರ್ ಗೋವು ತಾನು ಮೊದಲು ಮಾಡಿದ್ದ ತನ್ನದೇ ದಾಖಲೆಯನ್ನು ಮುರಿದು ಹಾಕಿ ಗಿನ್ನಿಸ್ ದಾಖಲೆ ಪಟ್ಟವನ್ನು ತನ್ನದಾಗಿಸಿಕೊಂಡಿತ್ತು. ಅಲ್ಲಿ ನಡೆದ ಹೆಚ್ಚಿನ ಹಾಲು ನೀಡುವ ಸ್ಪರ್ಧೆಯಲ್ಲಿ ಈ ಗೀರ್ ಹಸು 62 ಲೀಟರ್ ಹಾಲು ನೀಡುವ ಮೂಲಕ, ಹಿಂದಿನ ವರ್ಷ ತಾನೇ ಬರೆದಿದ್ದ 60 ಲೀಟರ್ ಹಾಲಿನ ದಾಖಲೆಯನ್ನು ಅಳಿಸಿ ಹಾಕಿತ್ತು. ಅಂದಿನಿಂದಲೂ ಇದೇ ದಾಖಲೆ ವಿಶ್ವ ದಾಖಲೆಯಾಗಿ ಉಳಿದುಕೊಂಡಿದೆ.



ಬಣ್ಣದಿಂದಲೇ ಈ ಜಾತಿಯ ದನಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಶುದ್ಧ ಈ ತಳಿಗಳ ಮೈ ಬಣ್ಣ ಯಾವುದೇ ಮಿಶ್ರಣವಿಲ್ಲದೆ ಒಂದೇ ಬಣ್ಣದಿಂದ ಕೂಡಿರುತ್ತದೆ. ಅದು ಇಡೀ ಕೆಂಪು ಬಣ್ಣದ್ದಾಗಿರಬಹುದು, ಇಲ್ಲವೇ ಮಸುಕು ಬಿಳಿಯ ಬಣ್ಣದ್ದಾಗಿರಬಹುದು. ಆದರೆ ಇಂದಿನ ದಿನಗಳಲ್ಲಿ ನಾಗರೀಕತೆಯ ಪ್ರಭಾವದಿಂದ ರಸ್ತೆಗಳು, ರೈಲು ಮತ್ತು ವಾಹನ ಸಾರಿಗೆಗಳ ಸೌಲಭ್ಯದಿಂದ ದನಗಳ ಚಲನವಲನಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಹಳ ಸುಲಭವಾಗಿ ಬೆರೆಯುವಂತೆ ಮಾಡಿದೆ. ಇದರಿಂದ ಈ ದನಗಳು ಇಂದು ಕೆಂಪು ಮತ್ತು ಬಿಳುಪು, ಕಪ್ಪು ಮತ್ತು ಬಿಳುಪು ಹಾಗೂ ನರೆ ಮಸುಕು, ಬಿಳಿ ಬಣ್ಣ ಮುಂತಾದ ಮಿಶ್ರಣ ಬಣ್ಣದಿಂದ ಕೂಡಿದ ಮಚ್ಚೆಗಳನ್ನೊಳಗೊಂಡಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಈ ದನಗಳ ಮೈ ಬಣ್ಣ ಒಂದು ಬಿಳಿಯ ಬಟ್ಟೆಯ ಮೇಲೆ ಕೆಂಪು ಅಥವಾ ಕಪ್ಪು ಬಣ್ಣವನ್ನು ಸಿಡಿಸಿದರೆ ಅದು ಹೇಗೆ ಕೆಂಪು ಅಥವಾ ಕಪ್ಪು ಚುಕ್ಕೆಗಳಿಂದ ಕೂಡಿರುತ್ತದೆಯೋ ಹಾಗೆ ಈ ದನಗಳ ಮೈ ಚುಕ್ಕೆಗಳಿಂದ ಕೂಡಿರುತ್ತದೆ. ಹೀಗೆ ಕಪ್ಪು ಕೆಂಪು, ಬಿಳಿಯ ಚುಕ್ಕೆಗಳಿಂದ ಕೂಡಿರುವುದರಿಂದ ಇದನ್ನು ಚಿಂಚಬಣ್ಣ(ಹಂಡಬಂಡ)ದ ಜಾತಿಯ ದನ ಎಂದು ಕರೆಯುವುದು ವಾಡಿಕೆಯಲ್ಲಿದೆ. ಹೊಟ್ಟೆಯ ಉಭಯ ಪಾರ್ಶ್ವಗಳಲ್ಲಿ ಅಥವಾ ಒಂದು ಕಡೆ ಗಾಢವಾದ ಅಥವಾ ತಿಳಿಯಾದ ಬಣ್ಣದ ಮಚ್ಚೆಯೊಂದು ಇದ್ದೇ ಇರುವುದು ಸ್ವಾಭಾವಿಕ. ಇದು ಈ ಜಾತಿಯ ದನಗಳ ವೈಶಿಷ್ಟ್ಯವು ಹೌದು.

1850ರಲ್ಲಿ ಕೃಷಿಮತ್ತು ಮಾಂಸಕ್ಕಾಗಿ ಭಾರತದ ಗೀರ್, ಕಾಂಕ್ರೇಜ್ ಮತ್ತು ಓಂಗೋಲ್ ತಳಗಳನ್ನು ಇಲ್ಲಿಂದ ಬ್ರೆಜಿಲ್‌ಗೆ ತೆಗೆದುಕೊಂಡುಹೋಗಲಾಗಿತ್ತು. ನಂತರ ಅದು ಈ ತಳಗಳನ್ನು ಉತ್ತಮ ರೀತಿಯಲ್ಲಿ ಸಂವರ್ಧಿಸಿ ಇಂದು ನಮಗೆ ಮಾರಾಟ ಮಾಡುವುದಕ್ಕೆ ಸಿದ್ಧತೆ ಮಾಡುತ್ತಿದೆ. ಈಗಾಗಲೇ ಬ್ರೆಜಿಲ್ ದೇಶದವರು ಗೀರ್ ಮತ್ತು ಓಂಗೋಲ್ ತಳಿಯನ್ನು ಅತ್ಯುತ್ತಮವಾಗಿ ಅಭಿವೃದ್ಧಿಗೊಳಿಸಿ ಇಡೀ ಪ್ರಪಂಚಕ್ಕೆ ಮಾರಾಟ ಮಾಡುತ್ತಿದ್ದಾರೆ. ನಮ್ಮಿಂದ 1960ರ ಇಸವಿಯವರೆಗೂ ಸಾಕಷ್ಟು ಈ ಜಾತಿಯ ಗೋವುಗಳನ್ನು ಇವರು ತೆಗೆದುಕೊಂಡು ಹೋಗಿದ್ದರು. ನಂತರದ ದಿನಗಳಲ್ಲಿ ಕೆಲ ಕಾನೂನು ಅಡೆತಡೆಗಳ ಕಾರಣ ಹಸುಗಳ ಸಾಗಾಟ ನಿಂತಿದೆ ಆಷ್ಟೆ, ಹಾಗೆಯೇ ಇತ್ತೀಚೆಗೆ ಭಾರತದಿಂದ ಎರಡು ಕಂಟೈನರ್‌ನಲ್ಲಿ ಗೀರ್ ತಳಿಯ ಭ್ರೂಣಗಳನ್ನು ಬ್ರೆಜಿಲಿಗೆ ತೆಗೆದುಕೊಂಡು ಹೋಗಲಾಗಿತ್ತು. ಅಷ್ಟೇ ಅಲ್ಲದೆ ಗುಜರಾತ್‌ನ ಭಾವನಗರದಲ್ಲಿರುವ ಒಂದು ಲ್ಯಾಬೋರೇಟರಿಗೆ ಈ ಭ್ರೂಣಗಳನ್ನು ಅಭಿವೃದ್ಧಿಗೊಳಿಸಲಿಕ್ಕಾಗಿ ಸುಮಾರು 2 ಕೋಟಿ ವ್ಯಯಮಾಡಲಾಗಿತ್ತು. ಅಲ್ಲಿ ಅವುಗಳನ್ನು ಅಭಿವೃದ್ಧಿಗೊಳಿಸಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶ ಹೊಂದಲಾಗಿತ್ತು.

ಬ್ರೆಜಿಲ್‌ನಂತೆ ಅಮೆರಿಕಾ ಖಂಡದ ಉಷ್ಣ ಪ್ರದೇಶಗಳಿಗೆ ಹೆಚ್ಚಾಗಿ ಟೆಕ್ಸಾಸ್, ಮೆಕ್ಸಿಕೋ, ಇಸ್ರೇಲ್ ಮೊದಲಾದ ದೇಶಗಳಿಗೂ ಈ ಗೀರ್ ತಳಿ ಭಾರತದಿಂದ ಸಾಗಾಟವಾಗಿದೆ. ಅಲ್ಲಿಯ ಸ್ಥಳೀಯ ಮಾಂಸದ ತಳಿಗಳನ್ನು ಅಭಿವೃದ್ಧಿಗೊಳಿಸುವುದರ ಸಲುವಾಗಿ ಈ ಗೀರ್ ತಳಿಯನ್ನು ತೆಗೆದುಕೊಂಡು ಹೋಗಲಾಗಿದೆ. ಅಲ್ಲಿ ಮಾಂಸಕ್ಕೆ ಹೆಚ್ಚು ಉಪಯುಕ್ತವಾದ ದನವಿದು ಎಂದು ಅಂದಾಜಿಸಲಾಗಿದೆ. ಹಾಗೆಯೇ ವಿದೇಶಗಳಿಗೆ ಅತ್ಯಂತ ಹೆಚ್ಚು ರಫ್ತಾದ ಅತ್ಯುತ್ತಮ ಹಾಲಿನ ತಳಿ ಕೂಡ ಇದೇ ಆಗಿದೆ. ಕೇವಲ ಗೀರ್ ತಳಿಯೊಂದಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಇಲ್ಲಿಯ ಹಾಲಿನ ತಳಿಗಳು ಇಂದು ನಮ್ಮಲ್ಲಿರುವುದಕ್ಕಿಂತ ಹೆಚ್ಚಾಗಿ ಮತ್ತು ಪರಿಶುದ್ಧವಾಗಿ ವಿದೇಶಗಳಲ್ಲಿ ಕಂಡುಬರುತ್ತವೆ. ಅವರುಗಳು ನಮ್ಮ ತಳಿಗಳ ಮಹತ್ವವನ್ನು ಅರಿತು ಅಲ್ಲಿಯ ತಳಿಗಳನ್ನು ಕಡೆಗಣಿಸಿ ಈ ತಳಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಮಾಡಿಕೊಳ್ಳುತ್ತಿದ್ದರೆ, ನಾವು ಇಂದಿಗೂ ಅವರಿಗೆ ಬೇಡವಾದ ಈ ವಿದೇಶಿ ತಳಿಗಳನ್ನು ಸಾಕುವುದರಲ್ಲೇ ಆಸಕ್ತ ತೋರಿಸುತ್ತಿದ್ದೇವೆ. ಇದು ಈ ದೇಶದ ರೈತರ ಹಾಗೂ ಪಶುಪಾಲಕರ ದೌರ್ಭಾಗ್ಯವೆಂದೇ ಹೇಳಬಹುದು.

ಹತ್ತಲ ಗಿಡ ಮದ್ದಲ್ಲ ಎನ್ನುವುದು ನಮ್ಮಲ್ಲಿ ಜನಪ್ರಿಯ ಗಾದೆ. ನಮ್ಮಲ್ಲಿನ ಯಾವುದೇ ಮದ್ದು ಉತ್ತಮವಲ್ಲ ಎಂಬ ಕೀಳು ಭಾವನೆ ಇಷ್ಟು ವರ್ಷವಾದರೂ ನಮ್ಮ ಜನಮಾನಸದಿಂದ ದೂರವಾಗಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಈ ಗೀರ್ ಸೇರಿದಂತೆ ಇಲ್ಲಿಯ ಹಾಲು ಕೊಡುವ ಬಹುತೇಕ ತಳಿಗಳನ್ನು ನಾವು ನಿರ್ಲಕ್ಷಿಸಿರುವುದೇ ಆಗಿದೆ. ನಾವಿಂದು ಅತಿ ಹೆಚ್ಚು ಹಾಲು ಕೊಡುತ್ತವೆ ಎಂದು ಯಾವ ವಿದೇಶಿ ತಳಿಗಳ ಮೊರೆ ಹೋಗಿದ್ದೇವೆಯೋ, ಅದಕ್ಕಿಂತಲೂ ಹೆಚ್ಚಿನ ಹಾಲು ನೀಡುವ ಗೋವಿನ ತಳಿಗಳು ನಮ್ಮ ದೇಶದಲ್ಲೇ ಕಂಡುಬರುತ್ತವೆ. ಆದರೆ ಅವುಗಳನ್ನೆಲ್ಲಾ ನಾವು ಕಡೆಗಣಿಸಿದ್ದೇವೆ ಎನ್ನುವುದೇ ವಿಪರ್ಯಾಸ.

ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ, ಬೆಳೆ ಸಮೀಕ್ಷೆ, ಎಣ್ಣೆಕಾಳು ಅಭಿಯಾನ: ಡಿಸಿ ಸಮ್ಮುಖದಲ್ಲಿ ಸಭೆ

ಬೆಳೆಗೆ ವಿಮೆ ಮಾಡಿಸಲು ಪ್ರೇರೇಪಿಸಿ

• **ದೇವನಹಳ್ಳಿ:** ಕೃಷಿ, ತೋಟಗಾರಿಕೆ ಅಧಿಕಾರಿಗಳು ಮತ್ತು ಬೆಳೆ ವಿಮಾ ಸಂಸ್ಥೆಗಳು ಜಂಟಿಯಾಗಿ ಸ್ಥಳೀಯ ಮಟ್ಟದಲ್ಲಿ ರೈತರಿಗೆ ಬೆಳೆ ವಿಮೆ ಬಗ್ಗೆ ಹಾಗೂ ಆದರಿಂದ ಆಗುವ ಅನುಕೂಲದ ಬಗ್ಗೆ ಅರಿವು ಮೂಡಿಸುವ ಮೂಲಕ ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ಪ್ರೇರೆಪಿಸಿ ಎಂದು ಜಿಲ್ಲಾಧಿಕಾರಿ ಎ.ಬಿ ಬಸವರಾಜು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಕಾರಿಯವರ ಕಚೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ, ಬೆಳೆ ಸಮೀಕ್ಷೆ, ಎಣ್ಣೆಕಾಳು ಅಭಿಯಾನ ಯೋಜನೆಯ ಜಿಲ್ಲಾ ಮಟ್ಟದ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿ, ರೈತರು ಬೆಳೆ ವಿಮೆ ಮಾಡಿಸುವುದರಿಂದ ಅತಿವೃಷ್ಟಿ, ಅನಾವೃಷ್ಟಿ ಹಾಗೂ ಇನ್ನೂ ಮುಂತಾದ ಪ್ರಕೃತಿ ವಿಕೋಪದಿಂದ ಬೆಳೆಗಳಿಗೆ ಹಾನಿಯಾದರೆ ಅಂತಹ ಸಂದರ್ಭದಲ್ಲಿ ಬೆಳೆ ನಷ್ಟ ಪರಿಹಾರ ಸಿಗಲಿದೆಂದರು. ಹಾಗಾಗಿ ಅಧಿಕಾರಿಗಳು ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಬಗ್ಗೆ ಜಿಲ್ಲೆಯ ಎಲ್ಲಾ ರೈತರಿಗೆ ಜಾಗೃತಿ ಮೂಡಿಸಿ ಬೆಳೆ ವಿಮೆಗೆ ನೋಂದಾಯಿಸಲು ಪ್ರೇರೆಪಿಸಬೆಕೆಂದು ಸಲಹೆ ನೀಡಿದರು. ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಬಿ.ಜಿ.ಕಲಾವತಿ, ಉಪನಿರ್ದೇಶಕರಾದ ಗಾಯಿತ್ರಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಾದ ಗುಣವಂತ ಜೆ, ರೇಷ್ಮೆ ಇಲಾಖೆ ಉಪನಿರ್ದೇಶಕರಾದ ಲಕ್ಷ್ಣ, ಜಿಲ್ಲಾ ಮಟ್ಟದ ಅಕಾರಿಗಳು, ಬೆಳೆ ವಿಮೆ ಪ್ರತಿನಿಗಳು, ರೈತ ಪ್ರತಿನಿಗಳು ಉಪಸ್ಥಿತರಿದ್ದರು.



ಬೆಳೆ ಸಮೀಕ್ಷೆ ನಿಖರವಾಗಿರಲಿ

ಪ್ರಸಕ್ತ ಸಾಲಿನ ಬೆಳೆ ಸಮೀಕ್ಷೆ ಆರಂಭಗೊಳ್ಳುತ್ತಿದೆ. ಸಮೀಕ್ಷೆಯು ಸರಿಯಾದ ಕ್ರಮದಲ್ಲಿ ಆಗಬೇಕಿದೆ. ಸಮೀಕ್ಷೆ ಮಾಡುವವರಿಗೆ ಸೂಕ್ತ ತರಬೇತಿ ನೀಡಬೇಕು. ಮೊಬೈಲ್ ಅಪ್ಲಿಕೇಶನ್ ನಲ್ಲಿ ಸಮೀಕ್ಷೆ ನಡೆಸಿ ನಿಖರ ಅಂಕಿ ಅಂಶಗಳನ್ನು ಕ್ರೋಢೀಕರಣ ಮಾಡಿ. ಬೆಳೆ ಸಮೀಕ್ಷೆಯಿಂದ ಸೆರೆ ಹಿಡಿಯಲಾದ ದತ್ತಾಂಶವನ್ನು ಸರ್ಕಾರದ ವಿವಿಧ ಯೋಜನೆಯಲ್ಲಿ ಕನಿಷ್ಠ ಬೆಂಬಲ, ಪಡ್ಡಿ ಪಾವತಿ, ಬೆಳೆ ಪ್ರದೇಶದ ಅಂದಾಜು ಕೃಷಿ ಮತ್ತು ತೋಟಗಾರಿಕೆ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆಗೆ ಮುಂತಾದ ಸೌಲಭ್ಯ ಒದಗಿಸಲು ಸಹಕಾರಿಯಾಗಲಿದೆ. ಆದ್ದರಿಂದ ಬೆಳೆ ಸಮೀಕ್ಷೆ ನಿಖರವಾಗಿ ಇರಲಿ ಎಂದು ಅಧಿಕಾರಿಗಳಿಗೆ ಡಿಸಿ ಸೂಚಿಸಿದರು.

ಯಾವ ಬೆಳೆಗೆ ಎಷ್ಟು ವಿಮೆ

ರಾಗಿ (ಮಳೆಯಾಶ್ರಿತ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 340 ರೂ. ಪಾವತಿಸಿದರೆ ವಿಮಾ ಮೊತ್ತ 17000 ರೂ, ಪಡೆಯಬಹುದು. ರಾಗಿ (ನೀರಾವರಿ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 406 ರೂ. ಪಾವತಿಸಿದರೆ ವಿಮಾ ಮೊತ್ತ 20,300ರೂ. ಪಡೆಯಬಹುದು. ಭತ್ತ (ನೀರಾವರಿ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 746 ರೂ. ಪಾವತಿಸಿದರೆ ವಿಮಾ ಮೊತ್ತ 37,300 ರೂ. ಪಡೆಯಬಹುದು. ಮುಸುಕಿನ ಜೋಳ (ನೀರಾವರಿ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 452 ರೂ. ಪಾವತಿಸಿದರೆ ವಿಮಾ ಮೊತ್ತ 22600 ರೂ. ಪಡೆಯಬಹುದು. ಮುಸುಕಿನ ಜೋಳ (ಮಳೆಯಾಶ್ರಿತ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 516 ರೂ. ಪಾವತಿಸಿದರೆ ವಿಮಾ ಮೊತ್ತ 25800 ರೂ. ಪಡೆಯಬಹುದು. ಹುರಳಿ (ಮಳೆಆಶ್ರಿತ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 164 ರೂ. ಪಾವತಿಸಿದರೆ ವಿಮಾ ಮೊತ್ತ 8200ರೂ. ಪಡೆಯಬಹುದು. ನೆಲಗಡಲೆ (ಮಳೆಆಶ್ರಿತ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 436 ರೂ. ವತಿಸಿದರೆ ವಿಮಾ ಮೊತ್ತ 21800 ರೂ. ಪಡೆಯಬಹುದು. ತೊಗರಿ (ಮಳೆಆಶ್ರಿತ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 384 ರೂ. ಪಾವತಿಸಿದರೆ ವಿಮಾ ಮೊತ್ತ 19,200ರೂ. ಪಡೆಯಬಹುದು. ತೊಗರಿ (ನೀರಾವರಿ) ರೈತರು ಪ್ರೀಮಿಯಂ ಮೊತ್ತ ಎಕರೆಗೆ 402ರೂ. ಪಾವತಿಸಿದರೆ ವಿಮಾ ಮೊತ್ತ 20100 ರೂ. ಪಡೆಯಬಹುದು. ಟೊಮೆಟೊ ಬೆಳೆಗೆ ರೈತರು ಪ್ರೀಮಿಯಂ ಮೊತ್ತ ಎಕರೆಗೆ 1,132 ರೂ.ಪಾವತಿಸಿದರೆ ವಿಮಾ ಮೊತ್ತ 56,600 ರೂ. ಪಡೆಯಬಹುದು. ರೈತರಿಗೆ ಕೃಷಿ ಕಾರ್ಯಾಗಾರವನ್ನು ಆಯೋಜನೆ ಮಾಡಿ, ರೋಗ ಬಾಧೆಯಿಂದ ಬೆಳೆಯ ರಕ್ಷಣೆ, ಗೊಬ್ಬರ ಪೂರೈಕೆ, ಇಳುವರಿ ಹೆಚ್ಚಿಸುವ ಬೆಳೆಗಳ ಕುರಿತು ಜಾಗೃತಿ ಮೂಡಿಸಬೇಕು. ಸಿರಿಧಾನ್ಯ, ಎಣ್ಣೆ ಕಾಳುಗಳ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ಕಲ್ಪಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದರು.

HosadigantaPg 07

BID TO ENSURE UREA SUPPLY FOR KHARIF & RABI CROPS

No Shutdown of Fertiliser Plants in FY26: Govt to Manufacturers

Move follows Chinese crackdown on shipments which squeezes fertiliser supply

Shambhavi Anand

New Delhi: The government has prohibited all fertiliser companies from scheduling any shutdowns for their plants in the financial year 2025-26 to meet the demand for urea after the Chinese crackdown on shipments to India squeezes supply of some soil nutrients.

"... considering the likely demand during the ongoing kharif season and upcoming rabi season it is imperative that the urea producing units take urgent steps and not plan any shutdown during the current fiscal year 2025-26," the department of fertiliser wrote to top fertiliser manufacturers on July 3. Indigenous urea production in the country is not commensurate with the total requirement of urea, it added.

"Plants are shut down for maintenance purposes failing which the efficiency of machines will be affected," said a senior executive of a top fertiliser brand, adding that maintenance must be done periodically and whenever needed. "It cannot be postponed," he added. "Suppose we do not shut our plants this fiscal year, first for kharif then for rabi season. After the fiscal year ends, it will be the beginning of next year's kharif season followed by rabi season, for which we will need urea," said a senior executive of another fertiliser company. During May 2025, the actual production of urea and complexes was lower than target.

India produced 22.36 LMT of urea in May against the target of 22.86 LMT, according to the data from the department of fertiliser. It imported 2.91 LMT of urea during the month.

However, the availability of urea was higher than the sales during May, according to the government data. India is also facing a shortage of DAP (di-ammonium phosphate) – the second most used fertiliser after urea – right from the beginning of the ongoing kharif season, as China has imposed restrictions on export of phosphate, a key ingredient for DAP, to India. This has affected the production of DAP in the country.China has also completely stopped the shipment of specialty fertilisers which are used to increase the yield of fruits, vegetables and other remunerative crops to India for over two months.

While urea, DAP and specialty fertilisers all are used for different purposes and cannot act as a substitute for each other, the government still wants the industry to produce more urea as others are in short supply. Urea is the most important and widely used fertiliser which provides nitrogen to the soil and is crucial for plant development.

In India, urea is provided to the farmers at subsidised rates.



Urea Conundrum

Move aims to meet urea demand for kharif & rabi

- Local urea production not meeting demand
  - In May, India produced 22.36 LMT of urea against target of 22.86 LMT
- India also facing shortage of di-ammonium phosphate (DAP)
  - China has stopped export of specialty fertilisers to India for over 2 months

Eco times Pg 04

---

60 ಸಾವಿರ ಗಿಡ ನೆಡುವ ಗುರಿ

ಬೆಂಗಳೂರು: ವಜ್ರಮಹೋತ್ಸವ ಆಚರಿಸುತ್ತಿರುವ ಬೆಂಗಳೂರು ಜಲಮಂಡಳಿ ವತಿಯಿಂದ ತನ್ನ ವ್ಯಾಪ್ತಿಯಲ್ಲಿ 60 ಸಾವಿರ ಗಿಡಗಳನ್ನು ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಹಸಿರು ಹಾದಿ – ನೀರಿನ ಭವಿಷ್ಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಜಿಕೆವಿಕೆ ಆವರಣದಲ್ಲಿ 60 ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದ ಅವರು, ನೀರು ಹಾಗೂ ಪರಿಸರದ ಸಂರಕ್ಷಣೆಗೆ ಹಸಿರು ವಾತಾವರಣ ಅತ್ಯಂತ ಅಗತ್ಯ. ಪ್ರತಿಯೊಬ್ಬರೂ ತಮ್ಮ ವ್ಯಾಪ್ತಿಯಲ್ಲಿ ಗಿಡ ನೆಡುವ ಮೂಲಕ ನಗರವನ್ನು ಇನ್ನಷ್ಟು ಸುಂದರಗೊಳಿಸುವುದಕ್ಕೆ ಕೊಡುಗೆ ನೀಡಬೇಕು. ಬೆಂಗಳೂರು ಜಲಮಂಡಳಿ ನಗರದಲ್ಲಿ ಬಹಳಷ್ಟು ಜಾಗವನ್ನು ಹೊಂದಿದೆ. ಈ ಜಾಗದಲ್ಲಿ ಗಿಡಗಳನ್ನು ನೆಡುವ ಮೂಲಕ ಹಸಿರು ಪರಿಸರವನ್ನು ಇನ್ನಷ್ಟು ಹೆಚ್ಚಿಸುವುದು ನಮ್ಮ ಉದ್ದೇಶವಾಗಿದೆ. ವಿಶ್ವ ಪರಿಸರ ದಿನದ ಪ್ರೇರಣೆಯಿಂದ "ಹಸಿರು ಹಾದಿ – ನೀರಿನ ಭವಿಷ್ಯ" ಎಂಬ ಘೋಷವಾಕ್ಯದಡಿಯಲ್ಲಿ ಈ ಗಿಡನೆಡುವ ಅಭಿಯಾನವನ್ನು ಚಾಲನೆ ನೀಡಲಾಗಿದೆ. ಒಂದು ವರ್ಷದ ಅವಧಿಯಲ್ಲಿ ಒಟ್ಟಾರೆಯಾಗಿ 60 ಸಾವಿರ ಗಿಡಗಳನ್ನು ನೆಡುವುದು ನಮ್ಮ ಉದ್ದೇಶವಾಗಿದೆ ಎಂದರು.

S-karnataka Pg 04

Prajavani Pg 10

ಡಿಎಪಿ, ಯೂರಿಯಾ ಒದಗಿಸಿ ಕೇಂದ್ರಕ್ಕೆ ರಾಜ್ಯ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯದಲ್ಲಿ ಶೇ 60ರಷ್ಟು ಕೃಷಿ ಬಿತ್ತನೆ ಪೂರ್ಣಗೊಂಡಿದ್ದು, ಅಗತ್ಯ ಪ್ರಮಾಣದ ಡಿಎಪಿ ಹಾಗೂ ಯೂರಿಯಾ ರಸಗೊಬ್ಬರ ಒದಗಿಸಬೇಕು' ಎಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸೋಮವಾರ ಮನವಿ ಮಾಡಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಇಲ್ಲಿ ಭೇಟಿ ಮಾಡಿದ ಕೃಷಿ ಸಚಿವ ಎನ್.ಚಲುವರಾಯ ಸ್ವಾಮಿ ಈ ಮನವಿ ಮಾಡಿದರು. 'ಯೂರಿಯಾ ಬಳಕೆಯನ್ನು ಶೇ 50ರಷ್ಟು ಕಡಿಮೆ ಮಾಡುವಂತೆ ಕೇಂದ್ರ ಸೂಚಿಸಿದೆ. ಈ ವರ್ಷ ರಾಜ್ಯದ ರೈತರಿಗೆ ಬೇಕಿರುವ ಯೂರಿಯಾ ಪೂರೈಸಲು ದಾಸ್ತಾನು ಮಾಡಿಕೊಳ್ಳಲಾಗಿದೆ. ಮುಂದಿನ ವರ್ಷದಿಂದ ಸಮಸ್ಯೆಯಾಗಲಿದೆ' ಎಂದು ಸಚಿವರು ಗಮನಕ್ಕೆ ತಂದರು.

'ರಾಜ್ಯದಲ್ಲಿ ಮುಂಗಾರು ಬಿತ್ತನೆ ಹಂಗಾಮಿಗೆ 4 ಲಕ್ಷ ಟನ್ ಡಿಎಪಿಯನ್ನು ಕೇಂದ್ರ ಹಂಚಿಕೆ ಮಾಡಿದೆ. ಏಪ್ರಿಲ್‌ನಿಂದ ಜುಲೈ ವರೆಗೆ 3.02 ಲಕ್ಷ ಟನ್ ಡಿಎಪಿ ಅಗತ್ಯ ಇದೆ. ಈ ಸಲ ಮುಂಗಾರು ಅವಧಿಗಿಂತ ಮುಂಚಿತವಾಗಿ ಪ್ರವೇಶಿಸಿದ್ದು, ಕೃಷಿ ಚಟುವಟಿಕೆಗೆ ಬಿರುಸಿನಿಂದ ಸಾಗಿದೆ. ಬೇಡಿಕೆಯ ಅವಧಿಯಲ್ಲಿ ರೈತರಿಗೆ ಡಿಎಪಿ ಪೂರೈಸಲು ಕೇಂದ್ರ ಸರ್ಕಾರ ನೆರವು ನೀಡಬೇಕು ಎಂದು ಅವರು ಮನವಿ ಮಾಡಿದರು.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

'ಮುಂಗಾರು ಹಂಗಾಮಿಗೆ 11.17 ಲಕ್ಷ ಟನ್ ಯೂರಿಯಾ ಹಂಚಿಕೆ ಮಾಡಲಾಗಿದೆ. ಏಪ್ರಿಲ್‌ನಿಂದ ಜುಲೈ ವರೆಗೆ 6.80 ಲಕ್ಷ ಟನ್ ಯೂರಿಯಾ ಅಗತ್ಯವಿದೆ. ಆದರೆ, ಈವರೆಗೆ ರಾಜ್ಯಕ್ಕೆ 3.98 ಲಕ್ಷ ಟನ್ ಯೂರಿಯಾ ಪೂರೈಕೆ ಆಗಿದೆ. ಜುಲೈ ತಿಂಗಳಲ್ಲಿ 2.25 ಲಕ್ಷ ಟನ್ ಯೂರಿಯಾ ಬೇಕಿದೆ. ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ರೈತರು ಅತೀ ಹೆಚ್ಚು ಯೂರಿಯಾ ಬಳಕೆ ಮಾಡುತ್ತಾರೆ. ಹೀಗಾಗಿ, ಕೇಂದ್ರವು ಅಗತ್ಯ ಪ್ರಮಾಣದ ರಸಗೊಬ್ಬರ ಸರಬರಾಜು ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ಮುಂಗಾರು ಹಂಗಾಮಿನಲ್ಲಿ ರಾಗಿ ಹಾಗೂ ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆ ನೀಡಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಹಿಂಗಾರಿನಲ್ಲಿ ಜೋಳ ಹಾಗೂ ರಾಗಿ ಬೆಳೆಯಲಾಗುತ್ತಿದೆ. ಹಿಂಗಾರಿನಲ್ಲಿ ಕನಿಷ್ಠ ಬೆಂಬಲ ಬೆಲೆ ಒದಗಿಸಲು ಕೇಂದ್ರ ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

'ಸಂಶೋಧನಾ ಚಟುವಟಿಕೆಗಳಿಗೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಖಾಸಗಿ ಸಂಸ್ಥೆಗಳಿಂದ ನೆರವು ಪಡೆಯುತ್ತಿವೆ. ಇದಕ್ಕೆ ಜಿಎಸ್‌ಟಿ ವಿಧಿಸಲಾಗುತ್ತಿದೆ. ಇದರಿಂದ ಹೊರೆಯಾಗಿದೆ. ಈ ಅನುದಾನಕ್ಕೆ ಜಿಎಸ್‌ಟಿಯಿಂದ ವಿನಾಯಿತಿ ನೀಡಬೇಕು ಎಂದು ಕೃಷಿ ಸಚಿವಾಲಯವು ಜಿಎಸ್‌ಟಿ ಮಂಡಳಿಗೆ ಪ್ರಸ್ತಾವ ಸಲ್ಲಿಸಬೇಕು' ಎಂದು ಅವರು ಮನವಿ ಮಾಡಿದರು.

ಕೃಷಿ ನವೋದ್ಯಮ ಚಟುವಟಿಕೆಗಳಿಗೆ ಇನ್ನಷ್ಟು ಉತ್ತೇಜನ ನೀಡಲು ಕೃಷಿ ನವೋದ್ಯಮ ಮೂಲನಿಧಿಯನ್ನು ಕೇಂದ್ರ ಸರ್ಕಾರ ಸ್ಥಾಪಿಸಬೇಕು ಎಂದು ಅವರು ಕೋರಿದರು.